OS 56/2019

PW-1

ದಿನಾಂಕಃ **16.06.2023** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಪಾಟೀ ಸವಾಲುಃ 3 ನೇ ಪ್ರತಿವಾದಿ ಪರ ಶ್ರೀ. ಹೆಚ್ ಎನ್ ಎನ್ ವಕೀಲರಿಂದಃ**

**ಸಾಕ್ಷಿಗೆ ಕನ್ನಡ ಭಾಷೆ ಅರ್ಥವಾಗದ ಕಾರಣ ಶ್ರೀ ಇ ಎಸ್ ಪಿ ಕನ್ನಡ ಅನುವಾದಕರಾಗಿ ನೇಮಿಸಿ ಪ್ರಮಾಣ ವಚನ ಬೋದಿಸಲಾಯಿತು.**

ನೀವು ಈ ದಾವೆಯನ್ನು ನಿಮ್ಮ ಕುಟುಂಬದ ಎಲ್ಲಾ ಸ್ವತ್ತುಗಳನ್ನು ಸೇರಿಸಿ ಹಾಕಿದ್ದೀರಾ ಅಥವಾ ಯಾವುದಾದರೂ ಸ್ವತ್ತುಗಳನ್ನು ಬಿಟ್ಟಿದ್ದೀರಾ ಎಂದರೆ ಸಾಕ್ಷಿ ನನ್ನ ಚಿಕ್ಕಪ್ಪ, ಚಿಕ್ಕಪ್ಪನ ಸ್ವತ್ತಗಳನ್ನು ಬಿಟ್ಟು ನಮ್ಮ ಕುಟುಂಬದ ಸ್ವತ್ತುಗಳಿಗೆ ಹಾಕಿದ್ದೇವೆ ಎಂದು ಉತ್ತರಿಸುತ್ತಾರೆ. ವೇಲೂರು ವೆಂಕಟಯ್ಯನವರ ಹೆಸರಿನಲ್ಲಿ ಯಾವ ಯಾವ ಸ್ವತ್ತುಗಳು ಇವೆ ಎಂದು ಹೇಳಲು ಆಗುವುದಾ ಎಂದರೆ ಸಾಕ್ಷಿ ಕೆಲವು ಹೇಳಲು ಆಗುತ್ತದೆ, ಮತ್ತೆ ಕೆಲವು ಹೇಳಲು ಆಗುವುದಿಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ತಂದೆ ವೇಲೂರು ವೆಂಕಟಯ್ಯನವರಿಗೆ ಸಂಬಂಧಿಸಿದ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ತಂದೆ ವೇಲೂರು ವೆಂಕಟಯ್ಯನವರಿಗೆ ಸಂಬಂಧಿಸಿದ ಆಸ್ತಿಗಳು ಎಲ್ಲಿಲ್ಲಿ ಇವೆ ಎಂದು ನಿಮಗೆ ಗೊತ್ತಿಲ್ಲ ಎಂದರೆ ಸಾಕ್ಷಿ ಕೆಲವು ಗೊತ್ತಿದೆ ಎಂದು ಉತ್ತರಿಸುತ್ತಾರೆ. ನಿಮಗೆ ಮದುವೆ ಮಾಡಿಕೊಟ್ಟ ಸಂದರ್ಭದಲ್ಲಿಯೇ ನಿಮಗೆ ಕೊಡಬೇಕಾದ ಆಸ್ತಿ, ದುಡ್ಡು ಮತ್ತು ಬಂಗಾರವನ್ನು ಕೊಟ್ಟು ಕಳುಹಿಸಿದ್ದಾರೆ ಎಂದರೆ ಸಾಕ್ಷಿ ಏನು ಇಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ತಂದೆ ವೇಲೂರು ವೆಂಕಟಯ್ಯನವರಿಗೆ ಸಂಬಂಧಿಸಿದ ಎಲ್ಲಾ ಆಸ್ತಿಗಳನ್ನು ಮತ್ತು ಜಮೀನುಗಳನ್ನು ಈ ಕೇಸಿನಲ್ಲಿ ಸೇರಿಸಿಲ್ಲ ಎಂದರೆ ಸಾಕ್ಷಿ ಸೇರಿಸಿದ್ದೇವೆ ಎಂದು ಉತ್ತರಿಸುತ್ತಾರೆ. ನಿಮ್ಮ ತಂದೆ, ನೀವು, ಮತ್ತು ಅಕ್ಕಂದಿರು ಎಲ್ಲರೂ ಸೇರಿ ಮಾತನಾಡಿಕೊಂಡು ನಿಮ್ಮ ತಮ್ಮನ ಮೇಲಿನ ದ್ವೇಷದಿಂದ ಈ ಕೇಸು ಹಾಕಿದ್ದೀರಿ ಎಂದರೆ ಸಾಕ್ಷಿ

ಇಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ತಮ್ಮ ನಿಮ್ಮ ತಂದೆಯ ವಿರುದ್ಧ ಒಂದು ಕೇಸ್ ಹಾಕಿದ್ದಾರೆ ಎಂದು ತಿಳಿದು ಬಂದ ನಂತರ ನೀವೆಲ್ಲರೂ ಕುಳಿತು ಮಾತನಾಡಿಕೊಂಡು ನಮ್ಮ ಕಡೆಯಿಂದ ಒಂದು ಕೇಸ್ ಇರಲಿ ಎಂದು ಈ ಕೇಸ್ ಹಾಕಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ತಾಯಿಯ ಕೊನೆಯ ಕಾಲದವರೆಗೆ ನಿಮ್ಮ  ತಮ್ಮ ಮತ್ತು ಅವರ ಮಕ್ಕಳು ಚೆನ್ನಾಗಿ ನೋಡಿಕೊಂಡಿದ್ದಾರೆ ಎಂದರೆ ಸಾಕ್ಷಿ ಯಾರು ನೋಡಿಕೊಂಡಿಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ತಾಯಿ ತೀರಿಕೊಳ್ಳುವ ಮುಂಚೆ ಯಾರ ಜೊತೆಯಲ್ಲಿ ವಾಸಿಸುತ್ತಿದ್ದರು ಎಂದರೆ ಸಾಕ್ಷಿ ನಮ್ಮ ತಂದೆ ಬದುಕಿರುವರೆಗೆ ನಾವುಗಳು ನೋಡಿಕೊಳ್ಳುತ್ತಿದ್ದೆವು ನಮ್ಮ ತಂದೆ ತೀರಿಕೊಂಡ ನಂತರ ನನ್ನ ತಮ್ಮ ನನ್ನ ತಾಯಿಯನ್ನು ಬೆಂಗಳೂರಿನ ಅವರ ಮನೆಗೆ ಕರೆದುಕೊಂಡು ಇರಿಸಿಕೊಂಡನು ಎಂದು ಉತ್ತರಿಸುತ್ತಾರೆ. ನಿಮ್ಮ ತಂದೆ ಬದುಕಿರುವಾಗಲೇ ನಿಮ್ಮನ್ನು ಮತ್ತು ನಿಮ್ಮ ಅಕ್ಕ ತಂಗಿಯರನ್ನು ಹಾಗೂ ತಮ್ಮನನ್ನು ಮದುವೆ ಮಾಡಿಕೊಟ್ಟು ಒಟ್ಟು ಕುಟುಂಬದಿಂದ ಬೇರೆ ಬೇರೆ ವಾಸ ಮಾಡಿಕೊಂಡಿದ್ದಿರಿ ನಿವ್ಯಾರೂ ಒಟ್ಟು ಕುಟುಂಬದಲ್ಲಿ ಇಲ್ಲ  ಎಂದರೆ ಸಾಕ್ಷಿ  ಮದುವೆ ಮಾಡಿಕೊಟ್ಟ ನಂತರ ನಾವು ನಮ್ಮ ಗಂಡನ ಮನೆಯಲ್ಲಿ ವಾಸವಿದ್ದೇವೆ ಎಂದು ಉತ್ತರಿಸುತ್ತಾರೆ. ನಿಮ್ಮ ತಂದೆ ವೇಲೂರು  ವೆಂಕಟಯ್ಯನವರಿಗೆ ಸಂಬಂಧಿಸಿದಂತೆ ದಾವೆಯಲ್ಲಿ ಹೇಳಿರುವ ಸ್ವತ್ತುಗಳಲ್ಲಿ ಅವರಿಗೆ ಯಾವುದೇ ಸ್ವತಂತ್ರವಾದ ಹಕ್ಕು ಅಧಿಕಾರ ಇರಲಿಲ್ಲ ಎಂದರೆ ಸಾಕ್ಷಿ ಹಕ್ಕಿದೆ ಎಂದು ಉತ್ತರಿಸುತ್ತಾರೆ. ನಿಮ್ಮ ತಂದೆ ವೇಲೂರು  ವೆಂಕಟಯ್ಯನವರಿಗೆ ಸಂಬಂಧಿಸಿದೆ ಎಂದು ಏನು ನೀವು ದಾವೆಯಲ್ಲಿ ಹೇಳಿದ್ದಿರೋ ಆ ಸ್ವತ್ತುಗಳಲ್ಲಿ ನಿಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸಾಕ್ಷಿ ಹಕ್ಕು ಇದೆ ಎಂದು ಉತ್ತರಿಸುತ್ತಾರೆ.

**ಮರು ವಿಚಾರಣೆ ಇಲ್ಲ.**

**(ನನ್ನ ಉಕ್ತಲೇಖನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.
ಪಾವಗಡ.